ಸರ್ಕಾರಿ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡಲು ಸರ್ಕಾರಿ ಆದೇಶ.

೧೩೮೪(೧೭೬೫)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ: ಎ.ಬಿ.ಮಾಲಕ ರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಸರ್ಕಾರವು ಆದೇಶಗಳನ್ನು ಹೊರಡಿಸಿದೆ.

೧. ಸರ್ಕಾರ ಆದೇಶ ಸಂಖ್ಯೆ. ಹೆಚ್.ಎಫ್.ಡಬ್ಲ್ಯೂ ೨೨೭ ಎಂ.ಎಂ.ಸಿ. ೭೦ ದಿನಾಂಕ ೧೨-೭-೧೯೭೦ ಮತ್ತು

೨. ಸರ್ಕಾರಿ ಆದೇಶ ಸಂಖ್ಯೆ. ಹೆಚ್.ಎಫ್.ಡಬ್ಲ್ಯೂ. ೨೧ ಎಂ.ಎಂ.ಸಿ. ೮೫ ದಿನಾಂಕ ೧೩-೬-೧೯೮೮ರಲ್ಲಿ ಸರ್ಕಾರಿ ವೈದ್ಯರು ಆಸ್ಪತ್ರೆಗಳ ಕಾಲಾವಧಿಯ ನಂತರ ಸರ್ಕಾರದ ಅನುಮತಿ ಪಡೆದ ಯಾವುದಾದರೂ ಒಂದು ನರ್ಸಿಂಗ್ ಹೋಂನಲ್ಲಿ ಪ್ರಾಕ್ಟೀಸ್ ಮಾಡಬಹುದಾಗಿದೆ.

೩. ತುರ್ತು ಸಮಯದಲ್ಲಿ ರೋಗಿಯ ನಿವಾಸಕ್ಕೆ ಭೇಟಿ ನೀಡಿ ತುರ್ತು ಚಿಕಿತ್ಸೆ ಒದಗಿಸಬಹುದಾಗಿದೆ.

೪. ಮೆಡಿಕಲ್ ಪ್ರಾಕ್ಟೀಸನ್ನು ತಮ್ಮ ಸ್ವಂತ ಮನೆಯಲ್ಲಿ ನಡೆಸಬಹುದಾಗಿದೆ.

೫. ಮೇಲಿನವುಗಳನ್ನು ಹೊರತುಪಡಿಸಿ ಸರ್ಕಾರಿ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುವುದನ್ನು ನಿಷೇಧಿಸಿದೆ.